**ನಂ.ಕೆಪಿಎಲ್‌ಸಿ/ಆಡಳಿತ/ಸಿಆರ್/13/15-16** **ದಿನಾಂಕ:25.07.2015**

ಪ್ರಿಯಶ್ರೀ ಶಂಕರ್ ರವರೇ,

**ವಿಷಯ:** ಬೆಂಗಳೂರು ನಗರ ಜಿಲ್ಲೆಯಲ್ಲಿ ಒತ್ತುವರಿ ತೆರವುಗೊಳಿಸಲಾಗಿದೆಯೆಂದು ವರದಿಸಲಾಗಿರುವ ಪ್ರಕರಣಗಳಲ್ಲಿ ವ್ಯಕ್ತವಾಗಿರುವ ನ್ಯೂನ್ಯತೆಗಳ ಬಗ್ಗೆ.

**ಉಲ್ಲೇಖ:1** ತಹಸೀಲ್ದಾರ್-1, ಕೆ.ಪಿ.ಎಲ್.ಸಿ. ಇವರು ನೀಡಿರುವ ಸ್ಥಳ ಪರಿಶೀಲನಾ ವರದಿಗಳು ದಿನಾಂಕ: 20.06.2014 ಮತ್ತು 26.06.2014.

**2** ತಹಸೀಲ್ದಾರ್-2, ಕೆ.ಪಿ.ಎಲ್.ಸಿ. ಇವರು ನೀಡಿರುವ ಸ್ಥಳ ಪರಿಶೀಲನಾ ವರದಿಗಳು ದಿನಾಂಕ: 20.06.2014.

****

ಸರ್ಕಾರಿ ಜಮೀನು ಒತ್ತುವರಿ ತೆರವು ವಿಚಾರದಲ್ಲಿ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮವು ಜಿಲ್ಲಾಡಳಿತ ಮತ್ತು ಸರ್ಕಾರದ ನಡುವೆ ನೋಡಲ್ ಪ್ರಾಧಿಕಾರವಾಗಿ ಕಾರ್ಯ ನಿರ್ವಹಿಸುತ್ತಿದೆ. ತತ್ಸಂಬಂಧವಾಗಿ ಎಲ್ಲಾ ಜಿಲ್ಲಾಧಿಕಾರಿಗಳಿಂದ ಪ್ರತಿ ತಿಂಗಳು ಸರ್ಕಾರಿ ಜಮೀನು ಒತ್ತುವರಿ ತೆರವು ಮಾಹಿತಿಗಳನ್ನು ನಿಗದಿತ ನಮೂನೆಗಳಲ್ಲಿ ಪಡೆದು ಕ್ರೋಢೀಕರಿಸಿ ಸರ್ಕಾರಕ್ಕೆ ಸಲ್ಲಿಸುತ್ತಿರುವುದು ತಮಗೆ ತಿಳಿದಿರುವ ವಿಚಾರವಾಗಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿನ ಸರ್ಕಾರಿ ಜಮೀನುಗಳು ಬಹು ಬೆಲೆಬಾಳುವ ಜಮೀನುಗಳಾಗಿದ್ದು, ಹಿಂಪಡೆದ ಜಮೀನುಗಳನ್ನು ಪುನ: ಒತ್ತುವರಿಯಾಗದಂತೆ ಅತಿ ಜಾಗರೂಕತೆಯಿಂದ ಸಂರಕ್ಷಿಸಬೇಕಾಗುತ್ತದೆ ಹಾಗೂ ಉತ್ತಮವಾಗಿ ಉಪಯೋಗಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ 2014ನೇ ಆಗಸ್ಟ್ ತಿಂಗಳಿನಿಂದ 2015ನೇ ಮೇ ತಿಂಗಳಿನವರೆಗೆ ತೆರವುಗೊಳಿಸಿದ ಸರ್ಕಾರಿ ಜಮೀನುಗಳ ಸರ್ವೆ ನಂಬರ್‌ವಾರು ವಿವರವಾದ ಮಾಹಿತಿಯನ್ನು ಪಡೆದುಕೊಂಡು, ಇವುಗಳ ಪೈಕಿ ಅಲ್ಲಲ್ಲಿ ಆಯ್ಕೆಮಾಡಿದ ಒತ್ತುವರಿಯಿಂದ ಹಿಂಪಡೆದ 25 ಜಮೀನುಗಳ ಹಾಲೀ ಭೌತಿಕ ಸ್ಥಿತಿಗತಿಗಳ ಬಗ್ಗೆ ಮನವರಿಕೆ ಮಾಡಿಕೊಳ್ಳುವ ಸಲುವಾಗಿ ಪ್ರಾಥಮಿಕ ಮಾಹಿತಿಗಳು ಅಂದರೆ, ಒತ್ತುವರಿಯಿಂದ ಹಿಂಪಡೆದ ಜಮೀನನ್ನು ಮಂಜೂರಾತಿ, ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಟ್ಟಿರುವುದು, ನ್ಯಾಯಾಲಯ ಪ್ರಕರಣಗಳಲ್ಲಿ ಒಳಗೊಂಡಿರುವುದು ಮುಂತಾದ ಅಂಶಗಳ ಬಗ್ಗೆ ಮಾಹಿತಿ ಒದಗಿಸುವಂತೆ ಆಯಾ ತಾಲ್ಲೂಕು ತಹಸೀಲ್ದಾರರುಗಳನ್ನು ಕೋರಲಾಯಿತು. ಈ ಬಗ್ಗೆ ತಹಸಿಲ್ದಾರರುಗಳು ನೀಡಿರುವ ಮಾಹಿತಿಗಳ ವಿವರ ಈ ಮುಂದಿನಂತಿವೆ.

1. ಆನೇಕಲ್ ತಾಲ್ಲೂಕು ಚಂದಾಪುರ ಸರ್ವೆ ನಂ. 5/1 ಮತ್ತು 52/6ರಲ್ಲಿನ ಒಟು 37.17 ಎ.ಗುಂ. ಜಮೀನಿಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು, ತಡೆಯಾಜ್ಞೆ ಇರುತ್ತದೆ. ಉಪ ವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ. ಈ ಜಮೀನಿನಲ್ಲಿ ಬಿ.ಎಂ.ಆರ್.ಡಿ.ಎ ಅನುಮತಿ ಪಡೆದು ಬಡಾವಣೆ ರಚಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. (ಇದರ ಮಾರ್ಗ ಸೂಚಿ ಮೌಲ್ಯ ರೂ: 80.43 ಕೋಟಿ)

2. ಬೆಂಗಳೂರು ಪೂರ್ವ ತಾಲ್ಲೂಕು ಕೆ.ಅರ್.ಪುರಂ ಹೋಬಳಿ ಹೂಡಿ ಸರ್ವೆ ನಂ. 30 ರಲ್ಲಿನ 1.20 ಎ.ಗು. ಸರ್ಕಾರಿ ಜಮೀನಿನ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಕ್ರಮಾಂಕ: 16142/2015 ಬಾಕಿ ಇರುತ್ತದೆ. (ರೂ.8.25 ಕೋಟಿ)
3. ಬೆಂಗಳೂರು ಉತ್ತರ(ಅಪರ) ತಾಲ್ಲೂಕು ಜಾಲಾ ಹೋಬಳಿ ಚಿಕ್ಕಜಾಲ ಸರ್ವೆ ನಂ. 76 ರಲ್ಲಿನ 4-00 ಎಕರೆ ಗೋಮಾಳದ ಜಮೀನಿನ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ. (ರೂ. 6.60 ಕೋಟಿ)
4. ಬೆಂಗಳೂರು ಉತ್ತರ(ಅಪರ) ತಾಲ್ಲೂಕು ಜಾಲಾ ಹೋಬಳಿ ಗಡೇನಹಳ್ಳಿ ಸರ್ವೆ ನಂ. 22 ರಲ್ಲಿನ 14.00 ಎಕರೆ ಗೋಮಾಳದ ಜಮೀನಿನ ಬಗ್ಗೆ ಉಪ ವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ. (ರೂ. 11.20 ಕೋಟಿ)
5. ಬೆಂಗಳೂರು ಉತ್ತರ(ಅಪರ) ತಾಲ್ಲೂಕು ಜಾಲಾ ಹೋಬಳಿ ನವರತ್ನ ಅಗ್ರಹಾರ ಗ್ರಾಮದ ಸರ್ವೆ ನಂ. 3 ಮತ್ತು 13 ರಲ್ಲಿನ ಒಟ್ಟು 10-00 ಎಕರೆ ಗೋಮಾಳದ ಜಮೀನಿನ ಬಗ್ಗೆ ಉಪ ವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ.(16.87 ಕೋಟಿ)
6. ಬೆಂಗಳೂರು ಉತ್ತರ(ಅಪರ) ತಾಲ್ಲೂಕು ಜಾಲಾ ಹೋಬಳಿ ಸಿಂಗಹಳ್ಳಿ ಸರ್ವೆ ನಂ. 6/328ರಲ್ಲಿನ ಗೋಮಾಳದ ಜಮೀನಿನ ಬಗ್ಗೆ ಕೆ.ಎ.ಟಿಯಲ್ಲಿ ಪ್ರಕರಣ ಬಾಕಿ ಇರುತ್ತದೆ. (ರೂ.4.40 ಕೋಟಿ)

ಸಂಬಂಧಪಟ್ಟ ತಹಸೀಲ್ದಾರರಿಂದ ಮಾಹಿತಿ ಪಡೆದ ನಂತರ ಈ ಮುಂದಿನ ಕೆಲವೊಂದು ಜಮೀನುಗಳನ್ನು ಭೌತಿಕ ಸ್ಥಿತಿ-ಗತಿಗಳನ್ನು ಮನವರಿಕೆ ಮಾಡಿಕೊಳ್ಳುವ ಸಲುವಾಗಿ ಕೆ.ಪಿ.ಎಲ್.ಸಿ.ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಹಸೀಲ್ದಾರರುಗಳಿಂದ ಸ್ಥಳ ಪರಿಶೀಲನೆ ಮಾಡಿಸಿದ್ದು, ವಿವರ ಈ ಮುಂದಿನಂತಿದೆ.

1 ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ ಮಾಚೋಹಳ್ಳಿ ಸರ್ವೆ ನಂ. 81ರಲ್ಲಿನ 96-12 ಎ.ಗುಂ. ಜಮೀನಿನ ಒತ್ತುವರಿ ತೆರವುಗೊಳಿಸಿ ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಮಾಹಿತಿ ಇರುತ್ತದೆ. ಆದರೆ, ಒತ್ತುವರಿದಾರು 4-5 ಎಕರೆ ಪ್ರದೇಶದಲ್ಲಿ ಇನ್ನೂ ಸ್ವಾಧಿನದಲ್ಲಿ ಇದ್ದು ಅವರ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಇವರನ್ನು ಭೌತಿಕವಾಗಿ ತೆರವು ಮಾಡಿರುವುದಿಲ್ಲ. ಈ ಜಮೀನಿನ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ 42019/2011 ಪ್ರಕರಣ ಬಾಕಿ ಇರುತ್ತದೆ. (ಮಾರ್ಗ ಸೂಚಿ ಮೌಲ್ಯ ರೂ. 130 ಕೋಟಿ)

2 ಬೆಂಗಳೂರು ಉತ್ತರ(ಅಪರ) ತಾಲ್ಲೂಕು ಯಲಹಂಕ ಹೋಬಳಿ ಅಮೃತಹಳ್ಳಿ ಸರ್ವೆ ನಂ. 95ರಲ್ಲಿನ 6.07 ಎಕರೆ ಜಮೀನು ಬಹುತೇಕ ಟಾರ್ ರಸ್ತೆಯ ಭಾಗವಾಗಿದೆ. ಸುಮಾರು 1.15 ಎ.ಗುಂ. ಒತ್ತುವರಿಯನ್ನು ದಿನಾಂಕ: 10.10.2014ರಂದು ತೆರವುಗೊಳಿಸಲಾಗಿದೆ. ಸದರಿ ಜಮೀನಿನ ಬಗ್ಗೆ ಡಬ್ಲ್ಯು.ಪಿ. 23873 ಪ್ರಕರಣ ಬಾಕಿ ಇರುತ್ತದೆ. ಭೂ ನ್ಯಾಯ ಮಂಡಳಿ ಮುಂದೆ ಎಲ್.ಆರ್.ಎಫ್. 17/2001 ಪ್ರಕರಣ ಬಾಕಿ ಇರುತ್ತದೆ. (ರೂ. 6.87 ಕೋಟಿ)

3 ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರು ಹೋಬಳಿ ಮುನ್ನೇಕೊಳಾಲು ಗ್ರಾಮದ ಸರ್ವೆ ನಂ. 36 ರಲ್ಲಿನ 7.18 ಎ.ಗುಂ ಜಮೀನು 1959ರಲ್ಲಿ ನವಜೀವನ ನಿಲಯ ಟ್ರಸ್ಟಿನವರಿಗೆ ಗುತ್ತಿಗೆಗೆ ನೀಡಿದ ಜಮೀನಾಗಿದ್ದು, ಕುಷ್ಟ ರೋಗಿಗಳಿಗೆ ಪುನರ್ವಸತಿಗಾಗಿ ನೀಡಲಾಗಿರುತ್ತದೆ. ಪರಭಾರೆ ಮಾಡಬಾರದೆಂಬ ಷರತ್ತು ಇರುತ್ತದೆ. ಗುತ್ತಿಗೆಯನ್ನು 1991ರಲ್ಲಿ ನವೀಕರಿಸಲಾಗಿದೆ. ಆದರೆ ಸದರಿ ಟ್ರಸ್ಟಿನವರು ಷರತ್ತು ಉಲ್ಲಂಘಿಸಿ ನವಪ್ರಜ್ಞ ಶಾಲೆ ಮತ್ತು ಮಹಿಳಾ ವಸತಿ ನಿಲಯ ನಿರ್ಮಿಸಿರುತ್ತಾರೆ. ಸದರಿ ಶಾಲೆಯನ್ನು ದಿನಾಂಕ: 2.5.2015ರಂದು ಮುಚ್ಚಿಸಲಾಗಿದಯೆಂದು ತಿಳಿಸಿದ್ದು, ಸ್ಥಳ ಪರಿಶೀಲನಾ ಸಮಯದಲ್ಲಿ ಸದರಿ ಶಾಲೆ ಕಾರ್ಯ ನಿರ್ವಹಿಸುತ್ತಿತ್ತು. ಸದರಿ

ಟ್ರಸ್ಟಿನವರು ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿ 19862/2015 ದಾಖಲಿಸಿರುವುದು ವ್ಯಕ್ತವಾಗಿರುತ್ತದೆ.(ರೂ. 55.87 ಕೋಟಿ)

4 ಬೆಂಗಳೂರು ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿ ರಾಮಾಪುರ ಸರ್ವೆ ನಂ. 71 ರಲ್ಲಿನ 4–21 ಎ.ಗುಂ ಜಮೀನನ್ನು ದಿನಾಂಕ: 19.8.2014ರಂದು ಒತ್ತುವರಿಯಿಂದ ಹಿಂಪಡೆದಿರುವುದಾಗಿ ಮಾಹಿತಿ ಇರುತ್ತದೆ. ಈ ಪೈಕಿ 3–00 ಎಕರೆ ಜಮೀನಿಗೆ ತಹಸೀಲ್ದಾರರ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ.

5 ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್.ಪುರಂ ಹೋಬಳಿ ಹೊರಮಾವು ಸರ್ವೆ ನಂ 82 ರಲ್ಲಿನ 3.21 ಎ.ಗುಂ ಜಮೀನು ಮುಫತ್ ಕಾವಲ್ ಎಂದು ವರ್ಗೀಕರಣಗೊಂಡಿರುತ್ತದೆ. ಸರ್ಕಾರಿ ಪ್ರಾಥಮಿಕ ಶಾಲೆ ಮತ್ತು ಆಟದ ಮೈದಾನ ಇರುತ್ತದೆ. 25*50 ವಿಸ್ತೀರ್ಣದಲ್ಲಿ ಬಿ.ಬಿ.ಎಂ.ಪಿ.ಯವರು ತ್ಯಾಜ್ಯ ವಿಂಗಡಣಾ ಘಟಕ ನಿರ್ಮಿಸಿರುತ್ತಾರೆ. ಸರ್ಕಾರಿ ಶಾಲೆಯ ಪಕ್ಕದಲ್ಲಿ ನಿರ್ಮಿಸಲಾಗಿದ್ದ ಅನಧಿಕೃತ ಕಟ್ಟಡಗಳನ್ನು ತೆರವು ಮಾಡಿಸಲಾಗಿರುತ್ತದೆ. 0–05 ಗುಂಟೆ ವಿಸ್ತೀರ್ಣದಲ್ಲಿ ದೇವಸ್ಥಾನ ಇದ್ದು, ಇದರ ಬಗ್ಗೆ ತಹಸೀಲ್ದಾರರ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ. (1..66 ಕೋಟಿ)

6 ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ, ಚಿಕ್ಕಬಾಣಾವರ ಗ್ರಾಮದ ಸರ್ವೆ ನಂ. 102ರ ಖರಾಬು ಜಮೀನಿನ 0–21ಗುಂಟೆ ಜಮೀನು ಕಾಲುವೆ ಜಮೀನಾಗಿರುತ್ತದೆ. ಸದರಿ ಜಮೀನಿನ ಒತ್ತುವರಿ ತೆರವುಗೊಳಿಸಿದ ಬಗ್ಗೆ ಸ್ಪಷ್ಟ ಮಾಹಿತಿ ಹಾಗೂ ದಾಖಲೆಗಳನ್ನು ಸ್ಥಳ ಪರಿಶೀಲನಾ ಸಮಯದಲ್ಲಿ ಒದಗಿಸಿರುವುದಿಲ್ಲ.

7 ಬೆಂಗಳೂರು ಉತ್ತರ(ಅಪರ) ತಾಲ್ಲೂಕು ಯಲಹಂಕ ಹೋಬಳಿ ಬೆಳ್ಳಹಳ್ಳಿ ಸರ್ವೆ ನಂ. 13 ರಲ್ಲಿನ 30–31 ಎ.ಗುಂ. ಜಮೀನು ಸರ್ಕಾರಿ ಬಂಡೆ ಜಮೀನಾಗಿರುತ್ತದೆ. ಸದರಿ ಜಮೀನಿನಲ್ಲಿ ದಿನಾಂಕ: 25.10.2014ರಂದು ಸುಮಾರು 20 ಗುಡಿಸಲುಗಳನ್ನು ತೆರವು ಮಾಡಿರುವುದಾಗಿ ತಿಳಿಸಿದ್ದು, ಸ್ಥಳ ಪರಿಶೀಲನ ಸಮಯದಲ್ಲಿ ಅನಧಿಕೃತ ಕ್ವಾರಿಯಿಂಗ್ ನಡೆಯುತ್ತಿತ್ತು. ಇದನ್ನು ನಿಲ್ಲಿಸಿರುತ್ತಾರೆ. ಆದ್ದರಿಂದ ಅನಧಿಕೃತ ಒತ್ತುವರಿಯನ್ನು ಪೂರ್ಣವಾಗಿ ನಿಲ್ಲಿಸಿರುವುದಿಲ್ಲ. (ರೂ.38.40 ಕೋಟಿ)

8 ಬೆಂಗಳೂರು ಉತ್ತರ(ಅಪರ) ತಾಲ್ಲೂಕು ಜಾಲಾ ಹೋಬಳಿ ಮಾರೇನಹಳ್ಳಿ ಸರ್ವೆ ನಂ. 173/ಪಿ–9ರಲ್ಲಿನ 1.00 ಎಕರೆ ಜಮೀನನ್ನು ವಿಶೇಷ ಜಿಲ್ಲಾಧಿಕಾರಿಗಳ ಅದೇಶದ ಅನ್ವಯ ಒಟ್ಟು 2–00 ಎಕರೆ ಜಮೀನನ್ನು ಸಕಾರದ ವಶಕ್ಕೆ ಪಡೆಯಲು ಆದೇಶಿಸಲಾಗಿರುತ್ತದೆ. ಆದರೆ ಸದರಿ ಜಮೀನಿನಲ್ಲಿ ಒಂದು ಮನೆ, ಮಾವು ಮತ್ತು ತೇಗದ ಮರಗಳು ಇರುತ್ತವೆ. ಸದರಿ ಜಮೀನನ್ನು ಇತ್ತೀಚೆಗೆ ಉತ್ತಿರುವುದು ಕಂಡುಬಂದಿರುತ್ತದೆ. ಒತ್ತುವರಿ ತೆರವುಗೊಳಿಸಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. (ರೂ.1.01 ಕೋಟಿ)

9 ಬೆಂಗಳೂರು ಉತ್ತರ(ಅಪರ) ತಾಲ್ಲೂಕು ಜಾಲಾ ಹೋಬಳಿ ಮೀಸಗಾನಹಳ್ಳಿ ಸರ್ವೆ ನಂ. 35/ಪಿ–1ರಲ್ಲಿನ 2–00 ಎಕರೆ ಜಮೀನು ಸರ್ಕಾರದ ವಶಕ್ಕೆ ಪಡೆದಿರುವುದಾಗಿ ಮಾಹಿತಿ ಒದಗಿಸಿದ್ದು, ತಾತ್ಕಾಲಿಕ ಬೆಳೆ ಇಟ್ಟಿರುವುದು ಕಂಡು ಬಂದಿರುತ್ತದೆ. (ರೂ.3.60 ಕೋಟಿ).

ಒತ್ತುವರಿಯಿಂದ ಹಿಂಪಡೆಯಲಾಗಿದೆಯೆಂದು ವರದಿಸಲಾಗಿರುವ ಜಮೀನುಗಳ ಬಗ್ಗೆ ಮೇಲ್ಕಾಣಿಸಿದ ಉದಾಹರಣೆಗಳಲ್ಲಿ ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರರು ಒದಗಿಸಿರುವ ಮಾಹಿತಿ ಹಾಗೂ ಸ್ಥಳ ಪರಿಶೀಲನೆ ಮಾಡಿರುವ ಕೆ.ಪಿ.ಎಲ್.ಸಿ. ತಹಸೀಲ್ದಾರರುಗಳು ಒದಗಿಸಿರುವ ಮಾಹಿತಿಯಿಂದ ವ್ಯಕ್ತವಾಗುವ ಅಂಶಗಳೇನೆಂದರೆ, ಕೆಲವೊಂದು ಜಮೀನುಗಳಲ್ಲಿ ಪೂರ್ಣವಾಗಿ ಒತ್ತುವರಿ ತೆರವು ಮಾಡಿರುವುದಿಲ್ಲ, ಒತ್ತುವರಿದಾರರು ಅವರ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ, ಒತ್ತುವರಿ ತೆರವು ಮಾಡಲಾಗಿದೆಯೆಂದು ಮಾಹಿತಿ ಒದಗಿಸಿದ್ದಾಗ್ಯೂ ಕೆಲವೊಂದು ಜಮೀನುಗಳಲ್ಲಿ ಬಡಾವಣೆ ಇರುವುದಾಗಿ ಮತ್ತು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದು ವ್ಯಕ್ತವಾಗಿರುತ್ತದೆ, ಇನ್ನು ಕೆಲವು ಜಮೀನುಗಳಿಗೆ ಸಂಬಂಧಪಟ್ಟಂತೆ ಕಂದಾಯಾಧಿಕಾರಿಗಳಾದ

ತಹಸೀಲ್ದಾರ್, ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರುತ್ತವೆ. ಇನ್ನು ಕೆಲವು ಜಮೀನಿನಲ್ಲಿ ಎಷ್ಟು ಒತ್ತುವರಿ ಇತ್ತು ಎಂಬ ಬಗ್ಗೆ ಖಚಿತ ಮಾಹಿತಿ ಒದಗಿಸಿರುವುದಿಲ್ಲ. ಈ ರೀತಿ ಸರ್ಕಾರಿ ಜಮೀನುಗಳ ಕೆಲವೊಂದು ಒತ್ತವರಿ ತೆರವು ಪ್ರಕರಣಗಳಲ್ಲಿ ಸ್ಥಾನಿಕ ಮಾಹಿತಿ ಹಾಗೂ ಜಿಲ್ಲಾಧಿಕಾರಿಗಳು ಒದಗಿಸಿರುವ ಮಾಹಿತಿಗಳಿಗೆ ತಾಳೆ ಇರುವುದಿಲ್ಲವೆಂಬ ಅಂಶವನ್ನು ಗಮನಿಸಲಾಗಿದೆ.

ಒತ್ತುವರಿ ತೆರವು ಗೊಳಿಸಲಾಗಿದೆಯೆಂದು ಜಿಲ್ಲಾಧಿಕಾರಿಗಳು ಒದಗಿಸುತ್ತಿರುವ ಮಾಹಿತಿಯನ್ನು ಸರ್ಕಾರ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಗಮನಕ್ಕೆ ತರಲಾಗುತ್ತಿದೆ. ಆದರೆ ವಾಸ್ತವವಾಗಿ ಕೆಲವೊಂದು ಪ್ರಕರಣಗಳಲ್ಲಿ ಒತ್ತುವರಿ ಪೂರ್ಣವಾಗಿ ತೆರವುಗೊಳಿಸಿರುವುದಿಲ್ಲ ಹಾಗೂ ಹಿಂಪಡೆದ ಜಮೀನನ್ನು ಸರ್ಕಾರದ ಸ್ವಧೀನದಲ್ಲಿ ಇಟ್ಟುಕೊಂಡಿರುವುದಿಲ್ಲ. ಒಂದು ಕಡೆ ಒತ್ತುವರಿ ತೆರವುಗೊಳಿದೆ ಎಂದು ವರದಿಸುವುದು, ಇನ್ನೊಂದು ಕಡೆ ಒತ್ತುವರಿದಾರರನ್ನೇ ಸದರಿ ಜಮೀನಿನಲ್ಲಿ ಮುಂದುವರೆಯಲು ಬಿಡುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಇದರಿಂದ, ಸರ್ಕಾರಿ ಜಮೀನು ಒತ್ತುವರಿ ತೆರವು ಪ್ರಕ್ರಿಯೆಯ ಮೂಲ ಉದ್ದೇಶ ಪರಾಭವಗೊಳ್ಳುತ್ತದೆ ಹಾಗೂ ಸಂಪನ್ಮೂಲ ಒತ್ತುವರಿದಾರರ ಪಾಲಾಗುತ್ತದೆ. ಇದಲ್ಲದೆ ನ್ಯಾಯಾಲಯ ಪ್ರಕರಣಗನ್ನೂ ಸಹ ಪರಿಣಾಮಕಾರಿಯಾಗಿ ಸಮರ್ಥಿಸಲು ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳುವುದು ಅತ್ಯಾವಶ್ಯಕ.

ಆದ್ದರಿಂದ, ಮೇಲೆ ವಿವರಿಸಿರುವ ಉದಾಹರಣೆಗಲ್ಲಿ ಕಂಡುಬಂದಿರುವ ವ್ಯತ್ಯಾಸಗಳನ್ನು ಗಮನದಲ್ಲಿ ಇಟ್ಟುಕೊಂಡು, ಬೆಂಗಳೂರು ನಗರ ಜಿಲ್ಲೆಯಲ್ಲಿ ಒತ್ತುವರಿ ತೆರವು ಮಾಡಲಾಗಿದೆಯೆಂದು ವರದಿಸಲಾಗಿರುವ ಎಲ್ಲಾ ಪ್ರಕರಣಗಳಲ್ಲಿ ಕೂಡಲೇ ಇನ್ನೊಮ್ಮೆ ತೀವ್ರ ಪರಿಶೀಲನೆ ಮಾಡಿಸಿ, ಒತ್ತುವರಿದಾರರನ್ನು ಸಂಪೂರ್ಣವಾಗಿ ಸರ್ಕಾರಿ ಜಮೀನಿನಿಂದ ಹೊರಹಾಕಿ, ಹಿಂಪಡೆದ ಸರ್ಕಾರಿ ಜಮೀನನ್ನು ತಪ್ಪದೇ ಸರ್ಕಾರದ ಸ್ವಾಧೀನದಲ್ಲಿ ಇಟ್ಟುಕೊಳ್ಳಲು ಕ್ರಮ ಜರುಗಿಸುವುದು. ನ್ಯಾಯಾಲಯ ಪ್ರಕರಣ ಬಾಕಿ ಇರುವ ಪ್ರಕರಣಗಳಲ್ಲಿ ಕೂಡಲೇ ಅವುಗಳ ಇತ್ಯರ್ಥಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು. ಇನ್ನು ಮುಂದೆ ಒತ್ತುವರಿ ತೆರವುಗೊಳಿಸುವ ಸರ್ಕಾರಿ ಜಮೀನುಗಳಲ್ಲಿ ಈ ರೀತಿಯ ವ್ಯತ್ಯಾಸಗಳು ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಸಹ ಅಳವಡಿಸಿಕೊಳ್ಳುವುದು.

ತಮ್ಮ ವಿಶ್ವಾಸಿ,
ಸಹಿ/-

**ಶ್ರೀ ವಿ.ಶಂಕರ್, ಭಾ.ಆ.ಸೇ.,**
ಜಿಲ್ಲಾಧಿಕಾರಿ,
ಬೆಂಗಳೂರು ಜಿಲ್ಲೆ, ಬೆಂಗಳೂರು.